ದಿನಾಂಕ 24.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಆರ್.ಕೆ.ಎಸ್., ವಕೀಲರಿಂದಃ**

39. ನನ್ನ ಗಂಡನಿಗೆ ಕೈಗೆ ಮತ್ತು ಕಾಲಿಗೇ ಲಕ್ವ ಹೊಡೆದಿರುತ್ತೆ. ಲಕ್ವ ಹೊಡೆದಿರುವ ಕಾರಣ ಅವರಿಗೆ ಎದ್ದು ಓಡಾಡಿಕೊಂಡು ಅವರ ಕೆಲಸ ಮಾಡಲಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ 11 ವರ್ಷದಿಂದ ತನ್ನ 2ನೇ ಹೆಂಡತಿಯ ಜೊತೆಯಲ್ಲಿ ಇರುತ್ತಾರೆ. 11 ವರ್ಷದಿಂದ ನನಗೆ ನನ್ನ ಗಂಡನ ಜೊತೆ ಅಷ್ಟೊಂದು ಒಡನಾಟ ಇಲ್ಲ ಎಂದರೆ ಸರಿ.

40. ನನ್ನ ಸ್ವಂತ ಊರು ಗುಲ್ಬರ್ಗಾದಲ್ಲಿ ಕನಗನ ಹಳ್ಳಿ ತಾಂಡ್ಯ. 6 ವರ್ಷದಿಂದ ನಾನು ಬಿಡದಿಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಗಂಡ ತನ್ನ ಕಿರಿಯ ಹೆಂಡತಿಯ ಜೊತೆ ಗುಲ್ಬರ್ಗಾದಲ್ಲೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಆರು ವರ್ಷಗಳ ಹಿಂದೆ ನಾನು, ನನ್ನ ತಂದೆ, ನನ್ನ ಮಗ ಮತ್ತು ಸೊಸೆ ಬಿಡದಿಗೆ ಬಂದಿರುತ್ತೇವೆ. ಆಗ ನನಗೆ ಕನಕಪುರದ ಶಿವರುದ್ರಾ ನಾಯ್ಕ (ಚಾಸಾ-6) ರವರ ಪರಿಚಯ ಮಾತ್ರ ಇತ್ತು. ಬಿಡದಿಗೆ ಬಂದ ನಂತರ ಸ್ವಲ್ಪ ಸಮಯದ ಕಾಲ ಚಾಸಾ-6 ರವರ ಬಳಿ ಕೆಲಸ ಮಾಡಿರುತ್ತೇವೆ.

41. ಬಿಡದಿಗೆ ಬಂದು ಆರು ತಿಂಗಳ ನಂತರ ನಾನು ಟಾರ್ ಪ್ಲಾಂಟ್ ಕೆಲಸಕ್ಕೆ ಸೇರಿರುತ್ತೇನೆ. ಅದರ ಮಾಲೀಕರ ಹೆಸರು ಬಸವನಗೌಡ. ಪರಿಚಯಸ್ಥ ಕಾರು ಚಾಲಕರೊಬ್ಬರು ನನ್ನನ್ನು ಟಾರ್ ಪ್ಲಾಂಟ್ ಕೆಲಸಕ್ಕೆ ಸೇರಿಸಿರುತ್ತಾರೆ. ಅಲ್ಲಿ 2 ವರ್ಷಗಳ ಕಾಲ ಕೆಲಸ ಮಾಡಿರುತ್ತೇವೆ. ನಾನು, ನನ್ನ ತಂದೆ ಮತ್ತು ನನ್ನ ಸೊಸೆ ಅಲ್ಲಿ ಕೆಲಸ ಮಾಡಿಕೊಂಡಿದ್ದೆವು. ಅಲ್ಲಿ ಕೆಲಸ ಮಾಡುವಾಗಿ ಟಾರ್ ಪ್ಲಾಂಟ್ ನಲ್ಲೇ ವಾಸವಿದ್ದೆವು. ನಮಗೆ ಮೂವರಿಗೆ ಒಟ್ಟು ಸೇರಿಸಿ ತಿಂಗಳಿಗೆ 13 ಸಾವಿರ ಸಂಬಳ ಕೊಡುತ್ತಿದ್ದರು. ನಮ್ಮೆಲ್ಲರ ಖರ್ಚು ವೆಚ್ಚ ಸದರಿ 13 ಸಾವಿರದಲ್ಲೇ ನಿಭಾಯಿಸಬೇಕಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ ನಾನು

ಹೋಟೇಲ್ ಕೆಲಸಕ್ಕೆ ಸಹಾ ಹೋಗುತ್ತಿದ್ದೆ. ಟಾರ್ ಪ್ಲಾಂಟ್ ನಲ್ಲಿ ಕೆಲಸ ಮಾಡುವಾಗ ನಾನು ನನ್ನತಂದೆ, ನನ್ನ ಮಗ ಮತ್ತು ನನ್ನ ಸೊಸೆ ಜೊತೆಯಲ್ಲಿಯೇ ವಾಸವಿದ್ದೆವು.

42. ಊರಿಗೆ ಹೋಗುವವರೆಗೆ ನಾವೆಲ್ಲಾ ಜೊತೆಯಲ್ಲಿಯೇ ವಾಸವಿದ್ದೆವು. ಟಾರ್ ಪ್ಲಾಂಟ್ ಅನ್ನು ಬಿಟ್ಟು ಹೊರಗೆ ಹೋಗಬೇಕಾದರೆ ನನ್ನ ತಂದೆ ಯಾ ನನ್ನ ಸೊಸೆಗೆ ಹೇಳಿಯೇ ಹೋಗಬೇಕಾಗಿತ್ತು ಎಂದರೆ ಸರಿ. ಆರೋಪಿ ನಮ್ಮ ಪಕ್ಕದ ಪ್ಲಾಂಟ್ ನಲ್ಲಿ ಅಂದರೆ ಚಾಸಾ-3 ರ ಪ್ಲಾಂಟ್ ನಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಸುಮಾರು 15 ರಿಂದ 20 ಜನ ಕೆಲಸಗಾರರಿದ್ದರು.

43. ನಾನು ಕೆಲಸ ಮಾಡುತ್ತಿದ್ದಂತಹ ಟಾರ್ ಪ್ಲಾಂಟ್ ಹಾಗೂ ಆರೋಪಿ ಕೆಲಸ ಮಾಡುತ್ತಿದ್ದಂತಹ ಟಾರ್ ಪ್ಲಾಂಟ್ ಸುಮಾರು 100 ಅಡಿ ಅಂತರವಿದೆ. ಸದರಿ ಟಾರ್ ಪ್ಲಾಂಟ್ ನ ಮಾಲೀಕರಾದ ಚಾಸಾ-3 ಕರೀಗೌಡನನ್ನು ನಾನು ನೋಡಿರುತ್ತೇನೆ. ಅವರ ಪ್ಲಾಂಟ್ ಗೆ ಕೆಲಸಕ್ಕೆ ಬರುವಂತೆ ಕರೆಯುತ್ತಿದ್ದ ಕಾರಣ ಅವರ ಪರಿಚಯವಾಗಿರುತ್ತದೆ. ಅವರ ಪ್ಲಾಂಟ್ ನಲ್ಲಿ ನಾನು ಕಸ ಗುಡಿಸುವುದು, ಪಾತ್ರೆ ತೊಳೆಯುವ ಕೆಲಸ ಮಾಡಿರುತ್ತೇನೆ. ಕರೀಗೌಡ ಕೆಲವೊಮ್ಮೆ ಪ್ಲಾಂಟ್ ಗೆ ಬರುತ್ತಿದ್ದರು. ಕರೀಗೌಡ ಆರೋಪಿ ನಾಗೇಗೌಡನ ಕೈಯಲ್ಲಿ ನನಗೆ ಸಂಬಳ ಕೊಡಿಸುತ್ತಿದ್ದರು. ಆರೋಪಿಯೇ ನನ್ನನ್ನು ಕರೀಗೌಡರ ಪ್ಲಾಂಟ್ ಗೆ ಕೆಲಸಕ್ಕೆ ಕರೆದಿರುತ್ತಾರೆ.

44. ನಾನು ಕೆಲಸ ಮಾಡುತ್ತಿದ್ದಂತಹ ಪ್ಲಾಂಟ್ ನ ವಿಸ್ತೀರ್ಣ ಈ ನ್ಯಾಯಾಲಯದ ಕೊಠಡಿಯ ಅಗಲದಷ್ಟಿದೆ. ಆರೊಪಿ ಕೆಲಸ ಮಾಡುವಂತ ಟಾರ್ ಪ್ಲಾಂಟ್‌ನ ವಿಸ್ತೀರ್ಣ ಇದಕ್ಕಿಂತ ಸ್ವಲ್ಪ ಹೆಚ್ಚಿ ಗೆ ಇದೆ. ಆರೋಪಿ ಕೆಲಸ ಮಾಡುತ್ತಿದ್ದಂತಹ ಪ್ಲಾಂಟ್ ನಲ್ಲಿ ಸಿಸಿ ಕ್ಯಾಮೆರಾ ಇದೆ. ನಾನು ಕೆಲಸ ಮಾಡುತ್ತಿದ್ದಂತಹ ಟಾರ್ ಪ್ಲಾಂಟ್ ನಲ್ಲಿ ಸಿಸಿ ಕ್ಯಾಮೆರಾ ಇಲ್ಲ. ಆರೋಪಿ ಕೆಲಸ ಮಾಡುತ್ತಿದ್ದಂತಹ ಪ್ಲಾಂಟ್ ನಲ್ಲಿ 2-3 ಸಿಸಿ ಟಿವಿಗಳಿದ್ದು ಯಾವ ಕಡೆಯಿಂದ ಬಂದರೂ ಸಹ ಕಾಣಿಸುತ್ತದೆ ಎಂದರೆ ಸರಿ.

45. ಈ ದೂರು ಕೊಡುವುದಕ್ಕಿಂತ ಮೂರು ತಿಂಗಳ ಪೂರ್ವದಲ್ಲಿ ಆರೋಪಿ ನನ್ನನ್ನು ಕರೆದು ತನಗೆ ಸಹಕರಿಸಬೇಕು ಎಂದು ಹೇಳಿರುವ ವಿಚಾರವನ್ನು ನಾನು ನನ್ನ ತಂದೆಗೆ ಮಗನಿಗೆ ಅಥವಾ ಸೊಸೆಗೆ ಹೇಳಿರಲಿಲ್ಲ. ಪೋಲೀಸರಿಗೂ ಸಹ ಆ ಬಗ್ಗೆ ದೂರು ನೀಡಲಿಲ್ಲ. ದೂರು ಕೊಡುವುದಕ್ಕಿಂತ 2 ತಿಂಗಳ ಪೂರ್ವದಲ್ಲಿ ಆರೊಪಿ ನನ್ನನ್ನು ಒತ್ತಾಯ ಮಾಡಿ ಕರೆದ ಎಂದು ಹೇಳುವುದಕ್ಕಿಂತ ದಿನದ ತಾರೀಖು, ಸಮಯ ಮತ್ತು ಅದು ಯಾವ ವಾರ ಎಂದು ನನಗೆ ಈಗ ಗೊತ್ತಿಲ್ಲ. ಈ ವಿಚಾರವನ್ನು ನನ್ನ ತಂದೆಗೆ, ಮಗನಿಗೆ ಹಾಗೂ ಸೊಸೆಗೆ ಹೇಳಿರಲಿಲ್ಲ. ಹೇಳಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆರೋಪಿ ರೌಡಿಗಳನ್ನು ಕರೆಸುತ್ತೇನೆ ಎಂದು ಹೆದರಿಸುತ್ತಿದ್ದ ಎಂದು ಉತ್ತರಿಸಿರುತ್ತಾರೆ.

46. ಈ ರೀತಿ ಹೆದರಿಸುತ್ತಿದ್ದ ಎಂಬ ವಿಚವರವನ್ನು ಸಹಾ ನಾನು ನನ್ನ ತಂದೆಗೆ, ಮಗನಿಗೆ ಹಾಗೂ ಸೊಸೆಗೆ ತಿಳಿಸಿರಲಿಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ ಆರೋಪಿಯ ಸ್ನೇಹಿತನಾದ ಸುರೇಶ್ ರವರಿಗೆ ಹೇಳಿದ್ದೆ. ಸುರೇಶ್ ನನಗೆ ಗೊತ್ತು. ಆತ ಹೆಗ್ಗಡಗೆರೆಯ ನಿವಾಸಿ. ನಾನು ಪೊಲೀಸರಿಗೆ ದೂರು ಕೊಟ್ಟ ಸಮಯದಲ್ಲಿ ಈ ವಿಚಾರವನ್ನು ನಾನು ಸುರೇಶ್ ಮತ್ತು ಉಮೇಶ್ ರವರಿಗೆ ತಿಳಿಸಿರುತ್ತೇನೆ ಎಂದು ಹೇಳಿಕೊಂಡಿರುತ್ತೇನೆ. ಆರೋಪಿ ನನ್ನನ್ನು ಒತ್ತಾಯಪೂರ್ವಕವಾಗಿ ಕರೆದಿಲ್ಲ ಹಾಗೂ ನನಗೆ ಯಾವುದೇ ರೀತಿಯಲ್ಲಿ ಬೆದರಿಕೆ ಒಡ್ಡಿಲ್ಲ ಎಂದರೆ ಸರಿಯಲ್ಲ.

47. ದೂರು ಕೊಡುವಕ್ಕಿಂತ ಪೂರ್ವದಲ್ಲಿ 2-3 ಬಾರಿ ಆರೋಪಿ ಶನಿವಾರ ಭಾನುವಾರ ನನ್ನ ಜೊತೆ ಲೈಂಗಿಕ ಸಂಭೋಗ ಮಾಡಿರುತ್ತಾರೆ. ತಾರೀಖು ನನಗೆ ಈಗ ಗೊತ್ತಿಲ್ಲ. ನಾನು ದೂರಿನಲ್ಲಿ ಆರೊಪಿ 2-3 ಬಾರಿ ಕೊಲೆ ಬೆದರಿಕೆ ಒಡ್ಡಿ ಲೈಂಗಿಕ ಸಂಭೋಗ ಮಾಡಿರುತ್ತಾನೆ ಎಂದು ಹೇಳಿ ಬರೆಸಿರುತ್ತೇನೆ. ಆ ರೀತಿ ಕೃತ್ಯ ಎಸಗಿದ ಸಮಯದಲ್ಲಿ ನನ್ನ ತಂದೆ ಮಗ ಹಾಗೂ ಸೊಸೆ ಬಿಡದಿಯಲ್ಲಿ ಇರಲಿಲ್ಲ.

48. ಆರೋಪಿ ನಿಮ್ಮ ಜೊತೆ ಲೈಂಗಿಕ ಸಂಭೋಗ ನಡೆಸಲು ಪ್ರಯತ್ನಿಸಿದಾಗ ನಿವೇನಾದರೂ ತಳ್ಳಿ ದೂಡಾಡಿ ಪ್ರತಿರೋಧಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಅವರ ಗಂಡಸರು, ನಾನೇನು ದೂಡಾಡುವುದು ಚಾಕು ತೋರಿಸಿದ ಎಂದು ಉತ್ತರಿಸಿರುತ್ತಾರೆ. ಚಾಕು ತೋರಿಸಿದ ಎಂದು ನಾನು ಪೊಲೀಸರಿಗೆ ಹೇಳಿರುತ್ತೇನೆ. ಅದು ತರಕಾರಿ ಕತ್ತರಿಸುವ ಚಾಕು ಆಗಿದ್ದು ನನ್ನ ಅಂಗೈ ಉದ್ದದಷ್ಟಿತ್ತು. ಆ ರೀತಿ ಆರೋಪಿ ಮಾಡಿದ ನಂತರ ನಾನು ಟಾರ್ ಪ್ಲಾಂಟ್ ನಿಂದ ಹೊರಗೆ ಬಂದು ಪೊಲೀಸರ ಬಳಿ ಹೋಗಿರುವುದಿಲ್ಲ. ಅಲ್ಲಿಂದ ನಾನು ಊರಿಗೆ ಹೋದೆ. ಊರಿನಲ್ಲಿ 8 ದಿನ ವಾಸವಿದ್ದೆ. ನಾನು ಊರಿಗೆ ಹೋಗುವಾಗ ನನ್ನ ಮನೆಯ ವಸ್ತುಗಳನ್ನೆಲ್ಲಾ ಹಾಲೋ ಬ್ಲಾಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ನನ್ನ ಸ್ನೇಹಿತರ ಬಳಿ ಇಟ್ಟು ಹೋಗಿದ್ದೆ. ನಾನು ಊರಿಗೆ ಭಾನುವಾರ ಹೋಗಿದ್ದು ದಿನಾಂಕ ಮತ್ತು ಇಸವಿ ನನಗೆ ಹೇಳಲು ಸಾಧ್ಯವಿಲ್ಲ.

49. ಊರಿಗೆ ಹೋದಾಗ ನಾನು ಆರೋಪಿ ಈ ರೀತಿ ಮಾಡಿರುತ್ತಾನೆ ಎಂದು ಯಾರಿಗೂ ಹೇಳಿರಲಿಲ್ಲ. ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಊರಿನಲ್ಲಿ ಇದ್ದಾಗ ಆರೋಪಿ ಒಂದು ದಿನಕ್ಕೆ ಸುಮಾರು 20 ರಿಂದ 30 ಬಾರಿ ಫೋನ್ ಮಾಡುತ್ತಿದ್ದ. 8 ದಿನವೂ ಆತ ಇದೇ ರೀತಿ ಫೋನ್ ಮಾಡಿರುತ್ತಾನೆ. ಊರಲ್ಲಿ ನಾನು ನನ್ನ ಮಗ ಸೊಸೆ ಅಥವಾ ತಂದೆಗೆ ನಾಗೇಗೌಡ ಈ ರೀತಿ ಫೋನ್ ಮಾಡುತ್ತಿದ್ದಾನೆ ಎಂದು ಹೇಳಲಿಲ್ಲ.

50. ಊರಿನಿಂದ ವಾಪಸ್ಸು ನಾನು ಭಾನುವಾರ ಹೊರಟು ಸೋಮವಾರ ಕಾಡುಮನೆ ಕ್ರಾಸ್ ಗೆ ಬೆಳಿಗ್ಗೆ 08-09 ಗಂಟೆಗೆ ತಲುಪಿದೆ. ಅಲ್ಲಿಂದ ಶಿವರುದ್ರ ನಾಯ್ಕ ಕೆಲಸಕ್ಕೆ ಕರೆದಲ್ಲಿಗೆ ಹೋದೆ. ನಾನು ಮತ್ತು ಇತರೆ 5 ಜನ ಕೆಲಸಗಾರರು ಅಲ್ಲಿಗೆ ಗಾರೆ ಕೆಲಸಕ್ಕೆ ಹೋಗಿದ್ದೆವು. ಊರಿನಿಂದ ಮತ್ತೆ ಪುನಃ ವಾಪಸ್ಸು ಬರುವಾಗ ಇಲ್ಲಿ ಉಳಿದುಕೊಳ್ಳಲು ಯಾವುದೇ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಕಾಡುಮನೆಯಲ್ಲಿ ವಾಸವಿದ್ದಂತ ನಮ್ಮ ಊರಿನವರಾದ ಬಾಲಪ್ಪ ಚಾಸಾ-8 ರವರ ಬಳಿ ಉಳಿದುಕೊಳ್ಳಬೇಕು ಎಂದು ಅಂದುಕೊಂಡಿದ್ದೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**